| Form No.4 (Civil) Deposition Sheets (R.P.No.57) |
|---|

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 4/2016

ಫ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ಮಲ್ಲಪ್ಪ |
| ತಂದೆಯ ಹೆಸರು | : | ರಾಮಲಿಂಗಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಕಿರದಳ್ಳಿ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 06-07-2024**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ಚಾಸಾ-4 ಅಂಬ್ರೇಶ ನನ್ನ ತಮ್ಮ. ಚಾಸಾ-5 ದೇವಪ್ಪ ನನ್ನ ಅಣ್ಣ. ಚಾಸಾ-6 ಹಣಮಂತ ನನ್ನ ತಮ್ಮ. ಚಾಸಾ-7 ನಿಂಗಮ್ಮ ನನ್ನ ತಂಗಿ. ನಾವು ಮಾದಿಗ ಜಾತಿಗೆ ಸೇರಿದವರು. ಆರೋಪಿತರು ಗೊತ್ತು. ಅವರ ಪೈಕಿ ಒಬ್ಬರು ಲಿಂಗಾಯತರು ಉಳಿದವರು ಹೊಲೆಯ ಜಾತಿಗೆ ಸೇರಿದವರು. ಈಗ್ಗೆ ಸುಮಾರು 8 ವರ್ಷ 9 ತಿಂಗಳ ಹಿಂದೆ ನಾನು, ಚಾಸಾ-8 ಸಾಯಬಣ್ಣ ಕಿರದಳ್ಳಿ ಗ್ರಾಮದ ನಮ್ಮ ಹೊಲದಿಂದ ಮನೆಗೆ ಹೋಗುತ್ತಿದ್ದೇವು. ಆಗ ಸಾಯಂಕಾಲ 7-30 ಗಂಟೆ ಆಗಿತ್ತು. ಹರಿಯಜರನ ಓಣಿಯಲ್ಲಿ ಗಲಾಟೆ ನಡೆದಿತ್ತು. ನಾವು ಹೋಗಿ ನೋಡಿದಾಗ ದೇವಪ್ಪ, ಹಣಮಂತ, ಅಂಬ್ರೇಶ, ನಿಂಗಮ್ಮ ಇದ್ದರು. ಅವರನ್ನು ಮಡಿವಾಳಪ್ಪ ದಬ್ಬಾಡುತ್ತಿದ್ದರು. ನಾನು ಯಾಕೆ ದಬ್ಬಾಡುತ್ತಿದ್ದಿರಿ ಎಂದು ಕೇಳಿದ್ದಕ್ಕೆ ಮಡಿವಾಳಪ್ಪ ನನ್ನ ತಮ್ಮ ಅಂಬ್ರೇಶನಿಗೆ ಕೊಡಲಿಯಿಂದ ತಲೆಗೆ ಹೊಡೆದು ಈ ಸೂಳೆ ಮಕ್ಕಳ ಸೊಕ್ಕು ಬಹಳ ಆಗಿದೆ ಜೀವ ತೆಗೆಯಬೇಕು ಅಂದ. ನನ್ನ ತಮ್ಮ ಅಂಬ್ರೇಶನಿಗೆ 3 ನೇ ಆರೋಪಿ ಸೋಮಪ್ಪ ಕಲ್ಲಿನಿಂದ ತೊಡೆಗೆ ಹೊಡೆದು ಬಾರಿ ಒಳಪೆಟ್ಟು ಮಾಡಿದ. ಆರೋಪಿ ರಾಮಪ್ಪ ಮತ್ತು ದೇವಪ್ಪ ಇವರು ನನ್ನ ತಮ್ಮ ಅಂಬ್ರೇಶನಿಗೆ ಕಾಲಿನಿಂದ ಒದ್ದರು. ಆರೋಪಿ ಮಾನಪ್ಪ ಕಬ್ಬಿಣದ ರಾಡಿನಿಂದ ನನ್ನ ತಮ್ಮ ಹಣಮಂತನ ತಲೆಗೆ ಜೊರಾಗಿ ಹೊಡೆದು ರಕ್ತಗಾಯ ಮಾಡಿದ. ತಮ್ಮ ಹಣಮಂತನಿಗೆ ಆರೋಪಿ ಮರೆಪ್ಪ ತಂದೆ ಬಸಪ್ಪ ಕಲ್ಲಿನಿಂದ ತೊಡೆಗೆ ಹೊಡೆದ. ನಮ್ಮ ಅಣ್ಣ ದೇವಪ್ಪನಿಗೆ ಆರೋಪಿ ಮಡಿವಾಳಪ್ಪ ಮತ್ತು ಶಿವಶರಣಪ್ಪ ಬಡಿಗೆಯಿಂದ ಕಾಲಿಗೆ ಮತ್ತು ಎಡರಟ್ಟೆಗೆ ಹೊಡೆದರು. ಆರೋಪಿ ಮರೆಪ್ಪ ತಂದೆ ಶಿವಶರಣಪ್ಪ

ಕೈ ಮುಷ್ಟಿ ಮಾಡಿ ನನ್ನ ಅಣ್ಣ ದೇವೇಂದ್ರಪ್ಪನಿಗೆ ಬಾಯಿಗೆ ಹೊಡೆದು ಗಾಯ ಮಾಡಿದ. ಬಿಡಿಸಲು ಬಂದ ನನ್ನ ತಂಗಿ ನಿಂಗಮ್ಮಳಿಗೆ ಆರೋಪಿ ವಿರೇಶ ಬಡಿಗೆಯಿಂದ ಎಡ ಭುಜಕ್ಕೆ ಹೊಡೆದು ಬಾರಿ ಗಾಯ ಉಂಟು ಮಾಡಿದ. ಸೀರೆ ಹಿಡಿದು ಎಳೆದು ಮಾನಭಂಗ ಮಾಡಲು ಪ್ರಯತ್ನ ಪಟ್ಟ. ನಾನು ಬಿಡಿಸಲು ಹೋದಾಗ ಆರೋಪಿ ಮಡಿವಾಳಪ್ಪ ತಂದೆ ಬಸಪ್ಪ ಕೈಯಿಂದ ನನ್ನ ಕಪಾಳಕ್ಕೆ ಬೆನ್ನಿಗೆ ಹೊಡೆದ. ಹೊಲದಲ್ಲಿ ನೀರು ಬಿಡುವ ವಿಷಯದಲ್ಲಿ ದ್ವೇಷ ಇತ್ತು. ಆ ವೈಮನಸ್ಸಿನಿಂದ ಈ ಗಲಾಟೆ ಮಾಡಿದರು.

ಸರಕಾರಿ ಅಭೀಯೋಜಕರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.